# ಸ್ವಾಮಿ ವಿವೇಕಾನಂದರ ಮಹಾನತೆ

**ನ**ಮ್ಮ ಹೊಸ ಪ್ರಪಂಚದ ಪ್ರಶ್ನೆಗಳಿಗೆ ಉತ್ತರಕೊಟ್ಟು ಬಾಳುವಷ್ಟು ಜೀವಾಳವು ಪುರಾತನವಾದ ಹಿಂದೂ ಮತದಲ್ಲಿರುವುದೆ? ಪಾಶ್ಚಾತ್ಯರ ವಿದ್ಯೆ ಚಮತ್ಕಾರಗಳೆದುರಿಗೆ ತಲೆಯೆತ್ತಿ ನಿಲ್ಲುವಷ್ಟರ ಬೆನ್ನುಮೂಳೆಯು ಈ ಆರ್ಷ ಸಂಸ್ಕೃತಿಗಿರುವುದೆ? ತರಂಗ ತರಂಗವಾಗಿ ಬರುತ್ತಿರುವ ವೈಜ್ಞಾನಿಕ ಶಕ್ತಿಗಳ ಪ್ರವಾಹದಿಂದ ಮುಳುಗದೆ ಕದಲದೆ ಉಳಿಯಲು ಬೇಕಾದ ಸತ್ತ್ವೋನ್ನತಿಯು ವೇದವೇದಾಂತಗಳಲ್ಲಿರುವುದೆ?



ನಲವತ್ತು ವರ್ಷಗಳ ಹಿಂದೆ (೧೧೭ ವರ್ಷಗಳಿಗೂ ಹಿಂದೆ – ಸಂ.) ಪ್ರಪಂಚವು ಈ ಪ್ರಶ್ನೆಯನ್ನು ಕೇಳುತ್ತಿತ್ತು, ಹಿಂದೂ ಲೋಕವೂ ಕೇಳುತ್ತಿತ್ತು. ಆಗ ಆ ಪ್ರಶ್ನೆಯನ್ನು ಧೈರ್ಯದಿಂದ ದಿಟ್ಟಿಸಿ ನೋಡಿ ಅದಕ್ಕೆ **"ಹೌದು"**, **"ಉಂಟು"** ಎಂದು ಘಂಟಾಘೋಷವಾಗಿ ಪ್ರಪಂಚವೆಲ್ಲವೂ ಕೇಳುವಂತೆ ಪ್ರತ್ಯುತ್ತರಕೊಡಲು ಶ್ರೀವಿವೇಕಾನಂದ ಸ್ವಾಮಿಗಳವರು ಎದ್ದು ನಿಲ್ಲದೆ ಹೋಗಿದ್ದಿದ್ದರೆ, ಹಿಂದೂ ಸಮಾಜವು ಇಂದು ಈಗಿನಷ್ಟಾದರೂ ನೂತನ ಚೇತನವನ್ನು ತೋರುವುದಕ್ಕೆ ಪ್ರತಿಯಾಗಿ ಮತ್ತಷ್ಟು ಕಳೆಗುಂದಿರುತ್ತಿತ್ತೆಂಬುದಕ್ಕೆ ಸಂಶಯವಿಲ್ಲ. ಲೋಕದಲ್ಲಿ ಯಾರ ಬಲವೂ, ಒಂದು ಪ್ರಾಣಿಯದೇ ಆಗಲಿ, ಒಂದು ಸಮಾಜದ್ದೇ ಆಗಲಿ, ಒಂದು ಕ್ಷಣವಿದ್ದಂತೆ ಮರುಕ್ಷಣವಿರಲಾರದು. ಬಲವು ಹೆಚ್ಚುತ್ತಿರಬೇಕು, ಇಲ್ಲವೆ ತಗ್ಗುತ್ತಿರಬೇಕು. ವಿವೇಕಾನಂದರ ಕಾಲಕ್ಕೆ ಹಿಂದೆ ಒಂದು ಮಹಾಶಂಕೆ –ಒಂದು ಮರಣಭೀತಿ– ಹಿಂದೂ ಸಮಾಜದ ಎದೆಗೆ ತಟ್ಟಿತು. ಅವರು ಆ ಭಯಕ್ಕೆ ಕಾರಣವಿಲ್ಲವೆಂದು ಭರವಸೆ ತೋರಿ, ಸಮಾಜದ ಆತ್ಮಶ್ರದ್ಧೆಯನ್ನು ಮರಳಿ ಬದುಕಿಸಿ, ಅದರ ಬಲೋತ್ಕರ್ಷೆಗೆ ದಾರಿಮಾಡಿ, ಅದರ ಆಯುರೇಖೆಯನ್ನು ವಿಸ್ತಾರಪಡಿಸಿದರು.

ಡಿ.ವಿ.ಜಿ. ಕನ್ನಡದ ದಾರ್ಶನಿಕ ಸಾಹಿತಿ. ಪರಿಪಕ್ವ ಸಂಸ್ಕಾರವುಳ್ಳ ಮೇರು ವ್ಯಕ್ತಿತ್ವ ಅವರದು. ಇವರು ಸ್ವಾಮಿ ವಿವೇಕಾನಂದರ ವ್ಯಕ್ತಿತ್ವಕ್ಕೆ ಮಾರುಹೋಗುತ್ತಿದ್ದರು; ಸ್ವಾಮೀಜಿಯ ವಿಚಾರಧಾರೆಗೆ ಆಕರ್ಷಿತರಾಗಿದ್ದರು. ಕುವೆಂಪು ಅವರ ಪ್ರಸಿದ್ಧವಾದ 'ಸ್ವಾಮಿ ವಿವೇಕಾನಂದ' ಪುಸ್ತಕ್ಕೆ ಅವರು ಬರೆದ ಮುನ್ನುಡಿ ಇದನ್ನು ವಿಶದಪಡಿಸುತ್ತದೆ. ಇಲ್ಲಿ ಪ್ರಸ್ತುತ ಪಡಿಸಿರುವ ಚಾರಿತ್ರಿಕ ಮತ್ತು ಸಾಹಿತ್ಯಿಕ ಮಹತ್ವವುಳ್ಳ ಆ ಬರಹ ಎಂದೆಂದಿಗೂ ಎಲ್ಲರಿಗೂ ಚೇತೋಹಾರಿಯಾದುದು.

ಹೀಗೆ ಸ್ವಮತ ಸಮಾಜಕ್ಕೆ ಆಯುರ್ದಾನ ಮಾಡುವ ಮಹಾಕಾರ್ಯದ ಉಪಾಂಗವಾಗಿ ಇತರ ಮತಗಳಿಗೂ ಅವರಿಂದ ಒಂದು ಉಪಕಾರ ನಡೆಯಿತು. ತಮ್ಮ ವೈದಿಕ ಪರಿಪಂಥಿಯು ಸತ್ತವನೆಂದು ಇತರ ಮತಗಳೂ ತಿಳಿಯಲಾಗದು. ಆ ಇತರ ಮತಗಳು ವಿಚಾರ ಮಾಡಬೇಕಾದ ಪ್ರಶ್ನೆಗಳೂ ಕಲಿಯಬೇಕಾದ ತತ್ತ್ವಗಳೂ ಇನ್ನೂ ಎಷ್ಟೋ ಇವೆ. ಈ ಭಾಗದಲ್ಲಿ ಅವುಗಳಿಗೆ ಹಿಂದೂ ಮತದಿಂದ ಸಹಾಯ ದೊರೆತೀತು. ಹೀಗೆಂದು ವಿವೇಕಾನಂದರು ಅನ್ಯಮತಗಳಿಗೂ ಎಚ್ಚರಿಕೆ ಕೊಟ್ಟು, ಅವುಗಳ ಆತ್ಮಪರಿಶೋಧನೆಗೆ ದಾರಿ ತೋರಿದರು.

ವೇದವೇದಾಂತಗಳ ಕೊಂಡಾಟದಿಂದಲೇ ತೃಪ್ತರಾದ ಮತಾಭಿಮಾನಿ ಅವರಲ್ಲ. ವೈದಿಕತತ್ತ್ವಗಳು ಮೇರುಪರ್ವತ–ದಂತಿದ್ದರೇನು; ವೇದಮಾರ್ಗಿಗಳೆಂದು ಹೇಳಿಕೊಳ್ಳುವವರ ಜೀವನವು ಪಾಚಿ ಬೆಳೆದ ಹಳ್ಳದ ನೀರಿನಂತಿರುವವರೆಗೂ ಅವರಿಗೆ ಉಳಿಗಾಲವಿಲ್ಲವೆಂಬುದನ್ನು ವಿವೇಕಾನಂದರು ಮರೆಯಲಿಲ್ಲ, ಮರೆಮಾಚಲಿಲ್ಲ. ಹಿಂದೂಸಮಾಜದ ಮೈಯ ಮೇಲೆ ಸಾವಿರಾರು ವರ್ಷಗಳ ವ್ಯಾಘಾತ ಚೇಷ್ಟಿತಗಳಿಂದ ಎಷ್ಟೋ ಗಂತಿಗಳೂ ಗೂನುಗಳೂ ಕಾಣಿಸಿಕೊಂಡಿವೆ; ಎಷ್ಟೋ ಧೂಳೂ ಕೊಳೆಯೂ ಕವಿದುಕೊಂಡಿವೆ. ಈ ವಿಚಾರಗಳನ್ನೆಲ್ಲ ಅದು ತನ್ನ ಪುರಾತನ ಸಂಪತ್ತೆಂದು ಭ್ರಮಿಸಿ, ಅದನ್ನು ಅಪ್ಪಿಕೊಂಡಿದೆ. ಇದೇ ಅವಸ್ಥೆಯಲ್ಲಿಯೇ ಅದು ಇನ್ನೂ ಕುಳಿತಿರುವುದಾದರೆ ಅದರ ಆರೋಗ್ಯವು ಮತ್ತೂ ಕೆಟ್ಟು ಕಾಲಕ್ರಮದಲ್ಲಿ ಅದು ತಾನಾಗಿ ನಶಿಸಬೇಕಾಗುವುದು. ಹಿಂದೂ ಸಮಾಜವು ತನ್ನ ತಮೋನಿದ್ರೆಯಿಂದ ಏಳಬೇಕು; ಕಣ್ತೆರೆದು ಸುತ್ತಮುತ್ತಲಿನ ಪ್ರಪಂಚವನ್ನು ನೋಡಬೇಕು; ಕೈಕಾಲುಗಳನ್ನು ಕೊಡಹಿ ಓಡಾಡಬೇಕು; ಜಡತೆಯೇ ಶಾಂತಿಯೆಂಬುದನ್ನೂ, ಜೀರ್ಣತೆಯೇ ಪೂಜ್ಯತೆಯೆಂಬುದನ್ನೂ ಬಿಡಬೇಕು; ಕೊಳಕು ಹಣ್ಣುಗಳನ್ನು ತೊಳೆಯಬೇಕು; ಮಣಕು ಬೊಂತೆಗಳನ್ನು ಬಿಸಾಡಬೇಕು;

ಕಿಟಕಿ ಬಾಗಿಲುಗಳನ್ನು ತೆರೆದು ಹೊರಗಿನ ಹೊಸ ಗಾಳಿ, ಬೆಳಕುಗಳನ್ನು ತನ್ನ ಮನೆಯೊಳಕ್ಕೆ ಬರಮಾಡಿಕೊಳ್ಳಬೇಕು. ಇದು ಸಾರ್ಥಕವಾಗುವ ಬದುಕಿಗೆ ದಾರಿ. ಹೀಗೆಂದು ಸಾರಿ ಸಂಸ್ಕಾರ ಸುಧಾರಣೆಗಳ ಆವಶ್ಯಕತೆಯನ್ನು ತೋರಿಸಿಕೊಡಲು ವಿವೇಕಾನಂದರು ಸ್ವಲ್ಪವೂ ಹಿಂಜರಿದವರಲ್ಲ. ಸ್ವಧರ್ಮದ ಶ್ರೇಷ್ಠತೆಯನ್ನು ಪ್ರಕಾಶಪಡಿಸಲು ಉತ್ಸಾಹಿಗಳಾಗಿದ್ದಂತೆ ಸ್ವಸಮಾಜದ ದೋಷದೌರ್ಬಲ್ಯಗಳನ್ನು ತೋರಿಸಿಕೊಡುವುದಕ್ಕೂ ಅವರು ಮುಂದಾಳಾಗಿದ್ದರು.

ಈ ಮುಮ್ಮೊಗದ ಕೆಲಸಕ್ಕೆ ಬೇಕಾಗಿದ್ದ ಯೋಗ್ಯತೆಗೆ ಸಂಸ್ಕೃತ ಪಾಂಡಿತ್ಯ ಮಾತ್ರವಲ್ಲ, ಇಂಗ್ಲಿಷ್ ವಾಗ್ಮಿತೆ ಮಾತ್ರವಲ್ಲ, ಧರ್ಮಾಭಿಮಾನ ಮಾತ್ರವಲ್ಲ, ಈ ಶಕ್ತಿಗಳೆಲ್ಲವೂ ಬೇಕಿದ್ದವು; ಅವುಗಳ ಜೊತೆಗೆ ಇನ್ನೂ ಕೆಲವು ಅಧಿಕಾರಗಳು ಅವಶ್ಯವಿದ್ದುವು. ಅವುಗಳಲ್ಲೆಲ್ಲಾ ದೊಡ್ಡದು ಧರ್ಮಮೂಲದ ನಿಶ್ಚಯಜ್ಞಾನ ಮತ್ತು ಅಂಥ ನಿಶ್ಚಯಜ್ಞಾನದೊಡನೆ ಬರುವ ಗಂಡೆದೆಯ ಧೈರ್ಯ. ಸ್ವಾಮಿ ವಿವೇಕಾನಂದರು ಸ್ವಾಭಾವಿಕವಾಗಿ ಅದ್ಭುತ ಪ್ರತಿಭಾಸಂಪನ್ನರು. ಅವರ ಬುದ್ಧಿ ವಿದ್ಯುದ್ವೇಗದಿಂದ ಸಂಚಾರಮಾಡತಕ್ಕುದು; ಅದು ಒಮ್ಮೆ ಲೀಲೆಯಿಂದ ಸಮುದ್ರದ ತಳಕ್ಕೆ ಧುಮುಕುವುದು; ಇನ್ನೊಮ್ಮೆ ಪಕ್ಷಿಯಂತೆ ಗಿರಿಶಿಖರಕ್ಕೆ ಹಾರುವುದು; ಮತ್ತೊಮ್ಮೆ ಹುಲ್ಲುಗಾವಲಿನ ಮೇಲೆ ಮಂದಮಾರುತದಂತೆ ಸುಳಿದಾಡುವುದು. ಒಂದು ತೀಕ್ಷ್ಣತೆ, ಒಂದು ಲಘುತೆ, ಒಂದು ಆವೇಶ, ಒಂದು ವಿಲಾಸ – ಇವು ಆ ಬುದ್ಧಿಯ ಗುಣಗಳು. ಅವರು ಸಂಸ್ಕೃತದಲ್ಲಿ ವ್ಯಾಕರಣ ತರ್ಕಶಾಸ್ತ್ರಗಳನ್ನು ಸಾಂಗವಾಗಿ ಅಭ್ಯಾಸ ಮಾಡಿದ್ದರು; ಹಾಗೆಯೇ ಇಂಗ್ಲಿಷ್‌ನಲ್ಲಿ ಕಾವ್ಯ ಇತಿಹಾಸಗಳನ್ನೂ, ವಿಜ್ಞಾನಶಾಸ್ತ್ರ ತತ್ತ್ವಮೀಮಾಂಸೆಗಳನ್ನೂ ವಿಸ್ತಾರವಾಗಿ ಪರಾಮರ್ಶಿಸಿ ಸ್ವಾಧೀನಪಡಿಸಿಕೊಂಡಿದ್ದರು. ಈ ಉಭಯ ವಿದ್ಯಾಪ್ರಾವೀಣ್ಯಕ್ಕೆ ಅನುರೂಪವಾದ ವಾಗ್ಧೋರಣೆ, ತದನುಗುಣವಾದ ಉತ್ತಾಲಧ್ವನಿ, ಉನ್ನತವಾದ ವರ್ಚಸ್ವಿಯಾದ ಗಂಭೀರಾಕಾರ, ಸಕಲಜನಮನೋಗ್ರಾಹಿಯಾದ ಹಾಸ್ಯ ವಿನೋದ ರಸಿಕತೆ, ಹೃದಯವಿದ್ರಾವಕವಾದ ಗಾನಮಾಧುರ್ಯ – ಇವೆಲ್ಲವೂ ಅವರಲ್ಲಿ ಸಮ್ಮಿಳಿತವಾಗಿದ್ದುವು. ಈ ನಾನಾ ಗುಣಶಕ್ತಿಗಳಿಗೆ ಕಿರೀಟಪ್ರಾಯವಾಗಿದ್ದುದು ಶ್ರೀರಾಮಕೃಷ್ಣ ಪರಮಹಂಸ ಗುರುಗಳ ಅನುಗ್ರಹ.

ಪರಮಹಂಸರು ಬ್ರಹ್ಮಸಾಕ್ಷಾತ್ಕಾರವನ್ನು ಪಡೆದಿದ್ದ ಮಹಾಮಹಿಮರು, ಜೀವನ್ಮುಕ್ತರು, ದಿವ್ಯದೃಷ್ಟಿಸಂಪನ್ನರು. ಇವರ ಪ್ರಸಾದದಿಂದ ಜೀವಸ್ವರೂಪ, ಭಗವತ್ಸ್ವರೂಪ, ಧರ್ಮಮೂಲಸ್ವರೂಪ – ಈ ರಹಸ್ಯಗಳು ವಿವೇಕಾನಂದರಿಗೆ ಕರತಲಾಮಲಕಗಳಾಗಿದ್ದುವು. ವೇದಾಂತವು ಅವರಿಗೆ ಹೊರಗಿನಿಂದ ತೋರುವ ಅಂಗರೇಖೆಯಾಗಿರಲಿಲ್ಲ; ಒಳಗೇ ಸಂತತವಾಗಿ ಚಲಿಸುವ ಶ್ವಾಸವಾಯುವಾಯಿತು. ಜೀವನದ ನಾನಾ ಅವಸ್ಥೆಗಳು, ಜೀವ ಜಗತ್ತುಗಳ ನಾನಾ ಸಂಬಂಧಗಳು, ಜೀವನಕ್ಕೆ ಆಗಬೇಕಾದ ನಾನಾ ಸಂಸ್ಕಾರಗಳು – ಈ ಸೂಕ್ಷ್ಮಗಳು ಸಕಲ ಮತಧರ್ಮಗಳಿಗೂ ಮೂಲಭೂತವಾದ ವಿಚಾರಗಳು. ಇವುಗಳನ್ನು ಕುರಿತ ನಿಸ್ಸಂಶಯವಾದ ಜ್ಞಾನವು ವಿವೇಕಾನಂದರಿಗೆ ಗುರುಗಳು ಕರುಣಿಸಿದ್ದ ಆತ್ಮಸಾಕ್ಷಾತ್ಕಾರ ಬಲದಿಂದ ಫಲಿಸಿತ್ತು. ವಿವೇಕಾನಂದರಿಗೆ ಲೋಕಬೋಧನೆಯು ಗ್ರಂಥಭಂಡಾರದಿಂದ ಹೊರಟಿದುದಲ್ಲ, ಶ್ರವಣ ಪರಿಚಯದಿಂದ ಬಂದುದಲ್ಲ; ಅದು ಅವರ ಆಂತರಿಕಾನುಭವದಿಂದ, ಅವರ ಅಂತರಾತ್ಮ ವಿಕಸನದಿಂದ, ಗಿಡದಿಂದ ಹೂವು ಹುಟ್ಟುವಂತೆ ತಾನಾಗಿ ಹುಟ್ಟಿಬಂದುದು. ಆದುದರಿಂದಲೇ ಅದರಲ್ಲಿ ಒಂದು ಜೀವದ್ಧ್ವನಿ, ಒಂದು ಜೀವೋತ್ತೇಜಕ ಪ್ರಭೆ, ಒಂದು ಜೀವನೋಪಯುಕ್ತ ಶಕ್ತಿ –ಇವು ತುಂಬಿವೆ.

## ವಿವೇಕಾನಂದ ಸ್ವಾಮಿ

**ಪುಣ್ಯಭೂಮಿಯೆ, ನಿನ್ನ ಪುಣ್ಯಗಂಧವನಖಿಲ**
**ಭುವನದೊಳ್ ಪಸರಿಸುತ ನಲಿವುದೆಂದು ।**
**ಆರ್ಯಕುಲಜರೆ, ನಿಮ್ಮ ನಿಜಧರ್ಮದೀಪಮಂ**
**ಮರಳಿ ಬೆಳಗಿಸಿ ಗುರುತೆವಡೆವುದೆಂದು ।**
**ವೇದಜನನಿಯೆ, ನಿನ್ನ ದಿವ್ಯಗಾನವ ಕೇಳಿ**
**ಜಗವೆಲ್ಲ ತಲೆವಾಗಿ ಬರುವುದೆಂದು ।**
**ವೇದಾಂತಕೇಸರಿಯೇ, ನಿದ್ರೆಯಂ ತೊರೆದು ನೀಂ**
**ಗುಹೆಯಿಂದ ಪೊರಮಟ್ಟು ಮೆರೆವುದೆಂದು ॥**
**ಇಂತು ನಿಜಜನಪದವನೆಲ್ಲರಂಗೊಳಿಸುತನಿಶಂ ।**
**ಭರತಮಾತೆಯ ಜೈತ್ರಯಾತ್ರೆಯೊಳ್ ಪ್ರಮುಖನೆನಿಸಿ ।**
**ವಿಬುಧವಂದಿತನಾಗಿ ಲೋಕಸಂಮಾನ್ಯನಾಗಿ ।**
**ಶ್ರೀ ವಿವೇಕಾನಂದನೆಸೆದನಂದು ॥**

**(ಡಿ.ವಿ.ಜಿ. ಯವರ *'ವಸಂತಕುಸುಮಾಂಜಲಿ'*, 1922)**

ವಿವೇಕಾನಂದರು ಸಂನ್ಯಾಸಿಯಾದರೂ ಜೀವನವನ್ನು ತುಚ್ಛವೆಂದೆಣಿಸಿದವರಲ್ಲ. ಈ ಜಗತ್ತು ಭಗವಂತನದು; ಇದರ ಜೀವನವು ಭಗವಂತನದು; ಆದಕಾರಣ ಬದುಕಿನ ವಿಷಯದಲ್ಲಿ ನಮಗೆ ಆದರ ಗೌರವಗಳಿರ ಬೇಕು; ಬದುಕು ಕೆಡುಕೆನ್ನದಿರಿ; ಪೌರುಷ ದಿಂದ ಬದುಕಿರಿ, ತೇಜಸ್ಸಿನಿಂದ ಬದುಕಿರಿ, ನಗುಮುಖದಿಂದ ಬದುಕಿರಿ – ಹೀಗೆಂಬ ಜೀವನೋತ್ಸಾಹವು ವಿವೇಕಾನಂದರ ಭೇರಿಯಿಂದ ಧ್ವನಿತವಾಗುತ್ತಿದೆ. •

# ಶ್ರೀಮಾತೆಯವರ ದಾಕ್ಷಿಣಾತ್ಯ ಶಿಷ್ಯರು

*(ಡಿಸೆಂಬರ್ ೨೦೧೦ ರ ಸಂಚಿಕೆಯಿಂದ)*

### ೩. ಸ್ವಾಮಿ ಅಂಬಾನಂದ

ಕೇರಳದ ತ್ರಿವಾಂಕೂರು ರಾಜ್ಯದವರಾದ ಇವರ ಪೂರ್ವಾಶ್ರಮದ ಹೆಸರು ಸಿ. ಮಧುರನ್ ಪಿಳ್ಳೈ. ಇವರು ಮತ್ತು ಇವರ ಸೋದರರಾದ ಸಿ. ದಾಮೋದರ ಪಿಳ್ಳೈ –ಇಬ್ಬರೂ ಸ್ವಾಮಿ ನಿರ್ಮಲಾನಂದರಿಗೆ ಪರಿಚಿತರಾಗಿದ್ದವರು. ಸ್ವಾಮಿ ನಿರ್ಮಲಾನಂದಜಿ ಅವರ ಸಹಾಯದಿಂದ ಅವರಿಬ್ಬರೂ ಬೇಲೂರುಮಠದಲ್ಲಿ ಇಳಿದುಕೊಂಡು, ಅಲ್ಲಿಂದ ಶ್ರೀಮಾತೆಯವರ ದರ್ಶನಕ್ಕಾಗಿ ಬಾಗ್‌ಬಜಾರ್‌ಗೆ ಹೋದರು. ಅಂದು, ೧೯೧೪ ನೇ ಇಸವಿ, ಸೆಪ್ಟೆಂಬರ್ ೧೯ ರ ಶನಿವಾರ, ಅಮಾವಾಸ್ಯೆಯ ದಿನ, ಇಬ್ಬರೂ ಶ್ರೀಮಾತೆಯವರ ಹತ್ತಿರ ಮಂತ್ರದೀಕ್ಷೆ ಪಡೆದರು.

ಸ್ವಾಮಿ ಅಂಬಾನಂದರು ತಾವು ಮಂತ್ರದೀಕ್ಷೆ ಪಡೆದ ಪೂರ್ಣ ವಿವರವನ್ನು ತಮ್ಮ ನೆನಪುಗಳಲ್ಲಿ ಬರೆದಿಟ್ಟಿದ್ದಾರೆ. ಶ್ರೀಮಾತೆ, ಅವರಿಗೆ ಕಾಳಿಯ ಮತ್ತು ಶ್ರೀರಾಮಕೃಷ್ಣರ ಮಂತ್ರಗಳನ್ನು ನೀಡಿದರು. ದೀಕ್ಷೆಯ ಅನಂತರ, ಶ್ರೀಮಾತೆಯವರ ಪಾದಗಳ ಬಳಿ ಗುರುದಕ್ಷಿಣೆಯಾಗಿ ಅವರಿಬ್ಬರೂ ಒಂದು ನಾಣ್ಯವನ್ನು ಇಟ್ಟರು. ಶ್ರೀಮಾತೆ ಅದನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸಿದರು.

ಶ್ರೀಮಾತೆ 'ಎಲ್ಲರ ಹೃದಯದಲ್ಲಿಯೂ ಅಂತರ್ಯಾಮಿನಿಯಾಗಿದ್ದಾರೆ' ಎಂಬ ಭಾವನೆಯು ಸ್ವಾಮಿ ಅಂಬಾನಂದರ ಅನುಭವಕ್ಕೆ ಬರುವಂಥ ಹಲವು ಘಟನೆಗಳು ಜರುಗಿದವು. ಅವರ ಮನೋಭಿಲಾಷೆಯನ್ನು ಪೂರೈಸಲು, ಅವರ ತಲೆಯ ಮೇಲೆ ಶ್ರೀಮಾತೆ ತಮ್ಮ ದಿವ್ಯಪಾದಪದ್ಮಗಳನ್ನು ಇರಿಸಿ, ಅವರನ್ನು ಕೃತಾರ್ಥರನ್ನಾಗಿ ಮಾಡಿದರು. ಒಂದು ಸಲ ಸ್ವಾಮಿ ಅಂಬಾನಂದರು ಶ್ರೀಮಾತೆಯವರನ್ನು ಪವಿತ್ರತೆ ಮತ್ತು ಭಕ್ತಿಗಳಿಗಾಗಿ ಪ್ರಾರ್ಥಿಸಿದರು. ಶ್ರೀಮಾತೆಯವರು ಒಂದು ಪುಷ್ಪವನ್ನು ಅವರ ತಲೆಗೆ ಮುಟ್ಟಿಸಿ, "ನಿನ್ನ ಇಚ್ಛೆಯನ್ನು ಶ್ರೀಗುರುಮಹಾರಾಜರು ನೆರವೇರಿಸುವರು" ಎಂದು ತಿಳಿಸಿದರು. ಮಂತ್ರದೀಕ್ಷೆ ಪಡೆದ ದಿನ ಅಂಬಾನಂದರು ಗಟ್ಟಿಯಾಗಿ ಜಪ ಮಾಡಲು ಆರಂಭಿಸಿದಾಗ, ಶ್ರೀಮಾತೆಯವರು ಜಪವು ಮಾನಸಿಕವಾಗಿರಬೇಕೆಂದು ತಿದ್ದಿದರು. ತಮ್ಮ ಅನ್ನಪ್ರಸಾದವನ್ನು ಕಳಿಸಿ, ಅವರ ಹೃದಯದ ಇಚ್ಛೆಯನ್ನು ಪೂರೈಸಿದರು. ತಾಯಿಯನ್ನು ಕಳೆದುಕೊಂಡಿದ್ದ ಅಂಬಾನಂದರ ದುಃಖವನ್ನು ಮರೆಸುವಂತೆ, ಹೆತ್ತ ತಾಯಿಯ ಸ್ನೇಹ ಮಮತೆಯನ್ನು ಶ್ರೀಮಾತೆ ಅವರಿಗೆ ಹರಿಸಿದರು.

ಸ್ವಲ್ಪ ದಿನಗಳ ನಂತರ ಅಂಬಾನಂದರು ಕಾಶಿಗೆ ಹೋಗಬೇಕಾಯಿತು. ಆಗ ಅಲ್ಲೇ ಇದ್ದ ಸ್ವಾಮಿ ಬ್ರಹ್ಮಾನಂದರಿಗೆ, ಶ್ರೀಮಾತೆಯವರ ಆಶೀರ್ವಾದವನ್ನು ತಿಳಿಸಿದರು. ಹಾಗೆಯೇ ಆ ಪುಣ್ಯಕ್ಷೇತ್ರದಿಂದ ಹಿಂದಿರುಗಿದಾಗ ಬ್ರಹ್ಮಾನಂದರ ಆದೇಶದಂತೆ, ಅವರು ಮಾತೆಯ ಆಶೀರ್ವಾದವನ್ನು ಸ್ವೀಕರಿಸಿದ ಬಗೆಯನ್ನು ವರ್ಣಿಸಿ, ಅವರ ಪರವಾಗಿ ಸಾಷ್ಟಾಂಗ ಪ್ರಣಾಮವನ್ನು ಸಲ್ಲಿಸಿದರು. ಶ್ರೀಮಾತೆ ಅವರಿಗೆ ಒಂದು ಜಪಮಾಲೆಯನ್ನು ಶುದ್ಧಮಾಡಿ ಕೊಟ್ಟರು. ಅಷ್ಟೇ ಅಲ್ಲ, ಅಂಬಾನಂದರು ಒಂದು ದಿನ ಶ್ರೀಮಾತೆಯವರ ಪಾದಗಳನ್ನು ತೊಳೆದು ಆ ಚರಣಾಮೃತವನ್ನು ತಾವು ಸ್ವೀಕರಿಸಿದರು; ಹಾಗೆಯೇ ಇತರರಿಗೆ ಕೂಡ ಶ್ರೀಮಾತೆಯವರ ಆಶೀರ್ವಾದ ರೂಪವಾಗಿ ಅದನ್ನು ನೀಡಿದರು. ಇವರ ಭಕ್ತಿಪೂರ್ಣ ನಡವಳಿಕೆಯಿಂದ ಶ್ರೀಮಾತೆ ಸಂತುಷ್ಟರಾದರು.

ಸ್ವಸ್ಥಾನಕ್ಕೆ ಹಿಂದಿರುಗಿದ ಕೆಲವು ವರ್ಷಗಳ ನಂತರ, ಶ್ರೀಮಾತೆಯವರಿಗೆ ಕಲ್ಲುಸಕ್ಕರೆಯನ್ನು ನಿವೇದಿಸಬೇಕೆಂದು ಸ್ವಾಮಿ ಅಂಬಾನಂದರಿಗೆ ಇಚ್ಛೆಯಾಯಿತು. ಅಂತರ್ಯಾಮಿನಿ ಮಾತೆಗೆ ಅದು ಹೇಗೆ ತಿಳಿಯಿತೋ, ಕೆಲವಾರು ದಿನಗಳಲ್ಲೇ ಕೊಲ್ಕತಾದಿಂದ ಶ್ರೀಮಾತೆಯವರು ಕಳಿಸಿದ ಕಲ್ಲುಸಕ್ಕರೆ ಪ್ರಸಾದ ಅಂಚೆ ಮೂಲಕ ತಲಪಿತು. ಭಕ್ತರು ತಮ್ಮ ಬಯಕೆಗಳನ್ನು ಹೇಳಿಕೊಳ್ಳದಿದ್ದರೂ ಶ್ರೀಮಾತೆಯವರು ಅದನ್ನು ಹೇಗೆ ಪೂರ್ಣಗೊಳಿಸುತ್ತಾರೆಂದು ತಿಳಿದು ಅಂಬಾನಂದರ ಹೃದಯ ಆನಂದದಿಂದ ತುಂಬಿಹೋಯಿತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.